C.R.P.67

Form No.4 (Civil)
Deposition Sheets
(R.P.No.57)

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>

S.C. No. 121/2021 ಸಿ. ಡಬ್ಲ್ಯೂ - 8 ಪಿ. ಡಬ್ಲ್ಯೂ -7

<u>ದಿನಾಂಕ : 22.01.2024 ರಂದು ಪ್ರಮಾಣ ವಚನ ಬೋಧಿಸಲಾಗಿದೆ</u>

| | |
|---|---|
| ಸಾಕ್ಷಿದಾರರ ಹೆಸರು | ತಮ್ಮೇಗೌಡ. ಜಿ. ಎಸ್. |
| ತಂದೆಯ ಹೆಸರು | ಶಿವರಾಮಯ್ಯ |
| ವಯಸ್ಸು | 67 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗರೆ ಗ್ರಾಮ |

<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

1. ನನಗೆ ಚಾಸಾ-1 ರಿಂದ 7 ಹಾಗೂ 9 ಗೊತ್ತು. ನನಗೆ ನಮ್ಮ ಊರಿನವರಾದ ನ್ಯಾಯಾಲಯದ ಮುಂದಿರುವ 5ನೇ ಆರೋಪಿ ಪುಟ್ಟ, 1ನೇ ಆರೋಪಿ ಇಂದು ಕುಮಾರ್ ಹಾಗೂ 6ನೇ ಆರೋಪಿ ಸ್ವರೂಪ್ ಗೊತ್ತು. (ಸಾಕ್ಷಿಯು 5ನೇ ಆರೋಪಿಯನ್ನು ಮಾತ್ರ ಸರಿಯಾಗಿ ಗುರುತಿಸಿದ್ದು, 6ನೇ ಆರೋಪಿಯನ್ನು ಹಾಜರು ಪಡಿಸಿಲ್ಲವಾದರೂ ಸಹ 1ನೇ ಆರೋಪಿಯನ್ನು ನೋಡಿ ಸಾಕ್ಷಿ ಆತನೇ 6ನೇ ಆರೋಪಿ ಎಂದು ಗುರುತಿಸಿರುತ್ತಾರೆ.)

2. ದಿ:09.05.2021 ರಂದು ಸಂಜೆ 7.30ರ ನಂತರ ನಾನು ನನ್ನ ಮಗಳ ಮನೆಗೆ ಹೋಗಲು ಗೆಜ್ಜಲಗೆರೆಯ ವಿಶ್ವೇಶ್ವರಯ್ಯ ಸ್ಟ್ಯಾಚ್ಯು ಬಳಿ ಹೋಗುತ್ತಿದ್ದನು. ಸದರಿ ಸ್ಥಳದಲ್ಲಿ ಆರೋಪಿಗಳಾದ ಸ್ವರೂಪ್, ಪುಟ್ಟ, ಇಂದು ಕುಮಾರ್, ಸಂತೋಷ್, ಪವನ್ ಹಾಗೂ ಗ್ರಾಮದ ಇತರೆ ಜನರು ಇದ್ದರು. ಅಲ್ಲಿ ಕ್ರಿಕೆಟ್ ಟೂರ್ನಮೆಂಟ್ ಬಗ್ಗೆ ಪವನ್, ಇಂದು ಕುಮಾರ್ ಹಾಗೂ ಸ್ವರೂಪ್ ನಡುವೆ ಗಲಾಟೆ ನಡೆಯುತ್ತಿತ್ತು. ನಾನು ಮೋಹನ್ ಹೋಗಿ ಸದರಿ ಗಲಾಟೆಯನ್ನು ಬಿಡಿಸಿದೆವು. ನಂತರ ಅಲ್ಲಿಗೆ ಹೇಮಂತ್ ಬಂದಾಗ ಆತನೊಂದಿಗೆ ಸ್ವರೂಪ್, ಪುಟ್ಟ, ಸಂತೋಷ್ ಗಲಾಟೆ ಪ್ರಾರಂಬಿಸಿದರು. ನಾವು ಸಮಾಧಾನ ಮಾಡಿ ಗಲಾಟೆಯನ್ನು ಬಿಡಿಸಿ ಅವರುಗಳನ್ನು ಕಳುಹಿಸಿದೆವು. ಹೇಮಂತ್ ಕುಮಾರ್ ಹಾಗೂ ಆನಂದ ತಮ್ಮ ತಮ್ಮ ಮನೆಗಳ ಕಡೆಗೆ ಹೋದರು.

3. 10ನೇ ತಾರೀಖಿನಂದು ಹೇಮಂತ್ ಕುಮಾರನ ಕೊಲೆಯಾಗಿದ್ದು, 11ನೇ ತಾರೀಖಿನಂದು ಹೇಮಂತ ಕುಮಾರನ ಶವನನ್ನು ಸಂಸ್ಕಾರಕ್ಕಾಗಿ ನಮ್ಮ ಊರಿನಲ್ಲಿರುವ ಹೇಮಂತ ಕುಮಾರನ ಜಮೀನಿನ

ಬಳಿ ತಂದಿದ್ದು, ಅಲ್ಲಿ ಇದ್ದ ಜನರು ಹೇಮಂತ್ ಕುಮಾರನನ್ನು ಮುಗಿಸಬೇಕು ಎಂದು ಸ್ಕೆಚ್ಚು ಮಾಡಿ ನಮ್ಮ ಊರಿನ ಹುಡುಗರು ಮಾತನಾಡಿಕೊಳ್ಳುತ್ತಿದ್ದರು ಎಂದು ನಮ್ಮ ಊರಿನ ರವಿ ಎನ್ನುವವರು ಹೇಳುತ್ತಿದುದ್ದನ್ನು ಆ ಸಮಯದಲ್ಲಿ ನಾನು ಕೇಳಿಸಿಕೊಂಡೆನು.

4. ಡೈರಿಯಿಂದ ಹೇಮಂತ್ ಕುಮಾರ ಬರುತ್ತಿದ್ದಾಗ ಆತನ ಬೈಕಿಗೆ ಗುದ್ದಿ ಆರೋಪಿಗಳಾದ ಸ್ವರೂಪ್, ಇಂದು ಕುಮಾರ ಹಾಗೂ ಪುಟ್ಟ ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಾಯಿತು. ಘಟನೆ ನಡೆದ ಹಲವಾರು ದಿನಗಳ ನಂತರ ಪೊಲೀಸರು ಈ ಬಗ್ಗೆ ನನ್ನನ್ನು ಕೇಳಿದರು.

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಸಿ. ಪಿ. ವಕೀಲರಿಂದ ಃ

5. ನಾನು ಕಳೆದ 7 ವರುಷಗಳಿಂದ ಕನ್ನಡಕ ಧರಿಸುತ್ತೇನೆ. ನನಗೆ ದೃಷ್ಟಿಯ ತೊಂದರೆ ಇರುವುದರಿಂದ ಜನರನ್ನು ಹತ್ತಿರದಿಂದ ನೋಡಿದರೂ ಸಹ ಅವರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ದೂರದಿಂದ ನೋಡಿದರೆ ಜನರನ್ನು ಗುರುತಿಸಲು ಕಷ್ಟವಾಗುತ್ತದೆ ಎಂದು ನುಡಿದಿದ್ದಾರೆ. ನನಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ.

6. ನಮ್ಮ ಊರಿನಲ್ಲಿ ನಮ್ಮ ಮನೆಯಿಂದ ನನ್ನ ಮಗಳ ಮನೆ ಒಂದು ಕಿಲೋಮೀಟರಿಗೂ ಕಡಿಮೆ ದೂರದಲ್ಲಿದೆ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ದಿನಾಂಕಃ 09.05.2021 ರಂದು ನಾನು ನನ್ನ ಮಗಳ ಮನೆಗೆ ಹೋಗಲು ಸ್ಟಾಚ್ಯು ಬಳಿ ಹೋಗುತ್ತಿದ್ದೆ ಎಂದು ಹೇಳಿರುವುದಿಲ್ಲ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ಆರೋಪಿ ಸ್ವರೂಪ್ ಸಹ ಆ ದಿನ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಇದ್ದ ಎಂದು ಹೇಳಿರುವುಲ್ಲ ಎಂದರೆ ಸರಿ. ಆ ದಿನ ಗಲಾಟೆ ನಡೆದಾಗ ಸಮಯ ರಾತ್ರಿ 7.30 ರಿಂದ 7.45 ಆಗಿತ್ತು.

7. ಕೋವಿಡ್ ಇದ್ದಾಗ ಮತ್ತು ಲಾಕ್ ಡೌನ್ ಇದ್ದಾಗ ನಮ್ಮ ಊರಿನಲ್ಲಿ ಅಂಗಡಿಗಳನ್ನು ಮುಚ್ಚಿದ್ದರು. ಲಾಕ್ ಡೌನ್ ಇದ್ದಾಗ ಪೊಲೀಸರು ನಮ್ಮ ಊರಿನಲ್ಲಿ ಇರುತ್ತಿದ್ದರು ಎದರೆ ಸಾಕ್ಷಿ ಪೊಲೀಸರು ಕೇವಲ ಬಂದು ಅಂಗಡಿ ಬಾಗಿಲು ತೆಗೆಯಬಾರದು ಎಂದು ಹೇಳಿ ಹೊರಟು ಹೋಗುತ್ತಿದ್ದರು ಎಂದು ನುಡಿದಿದ್ದಾರೆ.

8. ಗಲಾಟೆಯಾದಿ ದಿನ ಕ್ರಿಕೆಟ್ ಟೂರ್ನಮೆಂಟ್ ನಡೆಯುತ್ತಿರಲಿಲ್ಲ, ಕ್ರಿಕೆಟ್ ಟೂರ್ನಮೆಂಟ್ ಹಿನ್ನೆಲೆಯಲ್ಲಿ ಗಲಾಟೆಯಾಗುತ್ತಿತ್ತು. ಯಾವ ದಿನಾಂಕದಂದು ಕ್ರಿಕೆಟ್ ಟೂರ್ನಮೆಂಟ್ ನಡೆಸಬೇಕು ಎಂದು ಇದ್ದರು ಎಂದು ನನಗೆ ಗೊತ್ತಿಲ್ಲ. ಅಕ್ಕಪಕ್ಕದ ಊರಿನವರು ನಮ್ಮ ಊರಿಗೆ ಬಂದು ಕ್ರಿಕೆಟ್

ಟೂರ್ನಮೆಂಟ್ ಆಡುತ್ತಿದ್ದರು. ದಿಃ09.05.2021 ಕ್ಕೂ 10-15 ದಿನಗಳ ಹಿಂದೆ ಕ್ರಿಕೆಟ್ ಟೂರ್ನಮೆಂಟ್ ಆಗಿತ್ತು. ನಮ್ಮ ಊರಿನ ಹುಡುಗರು ಕ್ರೀಡಾಪಟುಗಳು, ಸ್ಕೂಲಿನವರು ಸದರಿ ಟೂರ್ನಮೆಂಟ್ ಅನ್ನು ನಡೆಸಿದ್ದರು.

9. ಗಲಾಟೆಯಾದ ದಿನ ನಾನು ವಿಶ್ವೇಶ್ವರಯ್ಯ ಸ್ಟಾಚ್ಯುನಿಂದ 10-20 ಅಡಿ ದೂರದಲ್ಲಿ ನಿಂತಿದ್ದೆನು. ಸ್ಥಳದಲ್ಲಿ 20-30 ಜನ ಗ್ರಾಮಸ್ಥರು ಸೇರಿದ್ದರು. ನಾನು ಫಿರ್ಯಾದಿಯ ಸಂಬಂಧಿಕ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಸುಮಾರು ಒಂದು ಕಿಮಿ ದೂರದಲ್ಲಿ ಫಿರ್ಯಾದಿಯ ಮನೆ ಇದೆ. ಶವ ಸಂಸ್ಕಾರ ನಡೆದ ಸ್ಥಳದ ಬಳಿ ಆರೋಪಿಗಳ ಸಂಚಿನ ಬಗ್ಗೆ ಮಾತನಾಡುತ್ತಿದ್ದ ರವಿ ಎಂದರೆ ಫಿರ್ಯಾದಿಯ ತಮ್ಮ. ಚಾಸಾ-7 ಮೋಹನ್ ನನ್ನ ಸಂಬಂಧಿಕರು ಎಂದರೆ ಸಾಕ್ಷಿ ಆತನ ನನ್ನ ಮಗಳ ಕಡೆ ಸಂಬಂಧಿ ಎಂದು ನುಡಿದಿದ್ದಾರೆ. ಚಾಸಾ-7 ಮೋಹನ್ ಫಿರ್ಯಾದಿಯ ಮಗಳ ಗಂಡ ಎಂದರೆ ಸರಿ. ಆದುದರಿಂದ ನಾನು ಮತ್ತು ಚಾಸಾ-7 ಸಂಬಂಧಿಕರು ಎಂದರೆ ಸಾಕ್ಷಿ ಹೌದು ಅಣ್ಣತಮ್ಮಂದಿರು ಎಂದು ನುಡಿದಿದ್ದಾರೆ.

10. ಹೇಮಂತ ಕುಮಾರನ ಶವ ಸಂಸ್ಕಾರದ ಸಮಯದಲ್ಲಿ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಿದ್ದರೋ ಇಲ್ಲವೋ ನಾನು ಗಮನಿಸಲಿಲ್ಲ. ಪೊಲೀಸರು ನನ್ನನ್ನು ಭೇಟಿ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ.

11. ದಿಃ 09.05.2021 ರಂದು ನಮ್ಮ ಊರಿನ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಕ್ರಿಕೆಟ್ ಟೂರ್ನಮೆಂಟ್ ವಿಚಾರವಾಗಿ ಗಲಾಟೆ ನಡೆಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 09.05.2021 ರಂದು ರಾತ್ರಿ 7.30 ರಿಂದ 7.45 ರ ಸಮಯದಲ್ಲಿ ನಮ್ಮ ಊರಿನ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಯಾವುದೇ ಗಲಾಟೆ ನಡೆದಿಲ್ಲ ಹಾಗೂ ನಾನುನ ಆದಿನ ಆ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

12. ಹೇಮಂತ ಕುಮಾರನನ್ನು ಹಳ್ಳದಿಂದ ಎಷ್ಟು ದೂರದಲ್ಲಿ ಹೊಡೆದು ಹಾಕಿದ್ದರು ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಸ್ಥಳಕ್ಕೆ ಹೋಗಿರಲಿಲ್ಲ. ಕೆ ಎಂ ಎಫ್ ನೀರು ಹರಿಯುವ ಹಳ್ಳ ವಿಶ್ವೇಶ್ವರಯ್ಯ ಸ್ಟಾಚ್ಯುನಿಂದ 400-500 ಅಡಿ ದೂರದಲ್ಲಿದೆ. ವಿಶ್ವೇಶ್ವರಯ್ಯ ಸ್ಟಾಚ್ಯು ನಮ್ಮ ಊರಿನ ಮಧ್ಯಭಾಗದಲ್ಲಿದೆ ಎಂದರೆ ಸರಿಯಲ್ಲ. ಕೆ ಎಂ ಎಫ್ ನೀರು ಹರಿಯುವ ಹಳ್ಳದಿಂದ ವಿಶ್ವೇಶ್ವರಯ್ಯ ಸ್ಟಾಚ್ಯು ಕಡೆಗೆ ಹೋಗುವ ರಸ್ತೆಯ 2 ಬದಿಯಲ್ಲಿ ಸಾಕಷ್ಟು ಮನೆಗಳಿವೆ ಎಂದರೆ ಸಾಕ್ಷಿ ಘಟನೆಯಾದ ಸಮಯದಲ್ಲಿ ಯಾವುದೇ ಮನೆಗಳು ಅಲ್ಲಿ ಇರಲಿಲ್ಲ, ಘಟನೆಯಾದ ನಂತರ ಒಂದೆರಡು ಮನೆಗಳು ಅಲ್ಲಿ ಆಗಿವೆ ಎಂದು ನುಡಿದಿದ್ದಾರೆ.

13. ಬೆಂಗಳೂರು-ಮೈಸೂರು ಹೆದ್ದಾರಿಯ ರಸ್ತೆಯ 2 ಬದಿಗಳಲ್ಲಿ ನಮ್ಮ ಊರಿನ ಭಾಗಗಳು ಇವೆ ಎಂದರೆ ಸರಿಯಲ್ಲ. ಘಟನೆ ನಡೆದಿದ್ದು ಬೆಂಗಳೂರು-ಮೈಸೂರು ಹೆದ್ದಾರಿಯ ಒಂದು ಕಡೆಯಾದರೆ ರಸ್ತೆಯ ಇನ್ನೊಂದು ಕಡೆ ಟೀ ಸ್ಟಾಲ್ ಇದೆ. ಕೆ ಎಂ ಎಫ್ ನೀರು ಹರಿಯುವ ಹಳ್ಳದಿಂದ ವಿಶ್ವೇಶ್ವರಯ್ಯ ಸ್ಟಾಚ್ಯು ಕಡೆಗೆ ಹೋಗುವ ದಾರಿಯಲ್ಲಿ ರಸ್ತೆಯ ಎಡಭಾಗದಲ್ಲಿ ನಮ್ಮ ಊರಿನ ಶಿವರಾಮಯ್ಯ ಎನ್ನುವವರ ಮನೆ ಹಾಗೂ ಅಂಗಡಿ ಹಾಗೂ ನತಂರ ಇತರೆ ಮನೆಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಘಟನೆಯಾದ ನಂತರ ಅಲ್ಲಿ ಕೆಲವು ಮನೆಗಳು ಆಗಿವೆ ಎಂದು ನುಡಿದಿದ್ದಾರೆ.

14. ವಿಶ್ವೇಶ್ವರಯ್ಯ ಸ್ಟಾಚ್ಯು ನಿಂದ ಕೆ ಎಂ ಎಫ್ ಹಳ್ಳಕ್ಕೆ ಹೋಗುವ ರಸ್ತೆ ಸ್ವಲ್ಪ ಡೊಂಕಾಗಿದೆ ಎಂದರೆ ಸರಿಯಲ್ಲ. ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ನಿಂತರೆ ಕೆ ಎಂ ಎಫ್ ನೀರು ಹರಿಯುವ ಹಳ್ಳ ಕಾಣುವುದಿಲ್ಲ ಎಂದರೆ ಸಾಕ್ಷಿ ಹಳ್ಳ ತಗ್ಗಿನಲ್ಲಿರುವುದರಿಂದ ಕಾಣುವುದಿಲ್ಲ ಎಂದು ನುಡಿದಿದ್ದಾರೆ.

15 ನಾನು ಫಿರ್ಯಾದಿಯ ಸಂಬಂಧಿಯಾಗಿರುವುದರಿಂದ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.